ರಾಷ್ಟ್ರೀಯ ಶಿಕ್ಷಣ ಸಮಿತಿ (ರಿ),

# ಜವಹರಲಾಲ್ ನೆಹರು ನ್ಯೂ ತಾಂತ್ರಿಕ ಮಹಾವಿದ್ಯಾಲಯ, ಶಿವ

No: JNNCE/ACSH/2022-23/ Date : 14.10.2022

## * ಸುತ್ತೋಲೆ *

**2022–23** ನೇ ಶೈಕ್ಷಣಿಕ ಸಾಲಿನಲ್ಲಿ ಕಾಲೇಜಿನ ವಿವಿಧ ಕೋರ್ಸುಗಳಲ್ಲಿ ವ್ಯಾಸಂಗ ಮಾಡುತ್ತಿರುವ ಅರ್ಹ **ಸಂಘಟಿತ ಸಂಸ್ಥೆಯ / ಕಾರ್ಖಾನೆಯ ಕಾರ್ಮಿಕರ ಮಕ್ಕಳಿಗೆ (ವಿದ್ಯಾರ್ಥಿಗಳಿಗೆ) "ಕರ್ನಾಟಕ ಕಾರ್ಮಿಕ ಕಲ್ಯಾಣ ಮಂಡಳಿ, ಬೆಂಗಳೂರು ಇವರು ವಿದ್ಯಾರ್ಥಿಗಳ ವ್ಯಾಸಂಗಕ್ಕೆ ಪ್ರೋತ್ಸಾಹ ಧನ ಸಹಾಯವನ್ನು ನೀಡಲಾಗುತ್ತಿದೆ.** ಈ ಪ್ರೋತ್ಸಾಹ ಧನಕ್ಕೆ ಅರ್ಜಿಯನ್ನು ಸಲ್ಲಿಸುವ ವಿದ್ಯಾರ್ಥಿಗಳು ಈ ಕೆಳಕಂಡ ಅರ್ಹತೆಯನ್ನು ಪಡೆದಿರಬೇಕು ಮತ್ತು ದಾಖಲಾತಿಗಳನ್ನು ಹೊಂದಿರಬೇಕು.

೧. ವಿದ್ಯಾರ್ಥಿಗಳ ಕಾರ್ಮಿಕ ಪೋಷಕರ ಮಾಸಿಕ ವೇತನ (ಸಂಬಳ) ರೂ. 35,000/- ಗಳನ್ನು ಮೀರಿರಬಾರದು.

೨. ಪೋಷಕರ ವಯೋಮಿತಿ 18-60 ವರ್ಷವಾಗಿರಬೇಕು.

೩. ಸಾಮಾನ್ಯ ವರ್ಗದ (GM/OBC) ವಿದ್ಯಾರ್ಥಿಗಳು ಹಿಂದಿನ ತರಗತಿಯಲ್ಲಿ ಶೇಕಡ ೫೦% ಅಂಕಗಳನ್ನು ಹಾಗೂ (SC/ST)

ಎಸ್.ಸಿ/ ಎಸ್.ಟಿ ವಿದ್ಯಾರ್ಥಿಗಳು ಶೇಕಡ 45% ಅಂಕಗಳನ್ನು ಪಡೆದು ಉತ್ತೀರ್ಣರಾಗಿರಬೇಕು.

೪. ಪ್ರಥಮ ವರ್ಷದ ವಿದ್ಯಾರ್ಥಿಗಳು ಹಿಂದಿನ ವರ್ಷದ ಅಂಕಪಟ್ಟಿ ಹಾಗೂ

Higher sem ವಿದ್ಯಾರ್ಥಿಗಳು ಹಿಂದಿನ ವರ್ಷದ ಅಂಕಪಟ್ಟಿ. (೨ sem marks cards)

5. ವಿದ್ಯಾರ್ಥಿಗಳ ಪೋಷಕರು ಕೆಲಸ ಮಾಡುತ್ತಿರುವ ಸಂಸ್ಥೆಯ / ಕಾರ್ಖಾನೆಯ ಗುರುತಿನ ಚೀಟಿಯನ್ನು ಹೊಂದಿರಬೇಕು.

6. ವಿದ್ಯಾರ್ಥಿಯ ತಂದೆ ಅಥವಾ ತಾಯಿ ಮರಣ ಹೊಂದಿದ್ದರೆ, ಅವರ ಮರಣ ಪ್ರಮಾಣ ಪತ್ರ.

7. ವಿದ್ಯಾರ್ಥಿಯ ಪೋಷಕರ ವೇತನ ಪ್ರಮಾಣ ಪತ್ರ.

8. ವಿದ್ಯಾರ್ಥಿಯ ಆಧಾರ್ ಕಾರ್ಡ, . ವಿದ್ಯಾರ್ಥಿಯ ತಂದೆ ಮತ್ತು ತಾಯಿಯ ಆಧಾರ್ ಕಾರ್ಡ.

9. ಸಿ.ಇ.ಟಿ ಅಥವಾ ಕಾಮೆಡ್-ಕೆ ಪ್ರವೇಶ ಪತ್ರ

10. ವಿದ್ಯಾರ್ಥಿಯ 2022-23ನೇ ಸಾಲಿನ ವ್ಯಾಸಂಗ ಪ್ರಮಾಣ ಪತ್ರ.

10. ವಿದ್ಯಾರ್ಥಿಯ 2022-23 ನೇ ಸಾಲಿನ ಕಾಲೇಜಿನ ಶುಲ್ಕದ ರಶೀದಿ.

12. ವಿದ್ಯಾರ್ಥಿಯ ಕಾಲೇಜಿನ ಗುರುತು ಪತ್ರ. (ID Card)

13.. ವಿದ್ಯಾರ್ಥಿಯ ಜಾತಿ ಹಾಗೂ ಆದಾಯ ಪ್ರಮಾಣ ಪತ್ರ.

14. ವಿದ್ಯಾರ್ಥಿಯ ಆಧಾರ್ ಸಂಖ್ಯೆ ಜೋಡಣೆಯಾಗಿರುವ ವಿದ್ಯಾರ್ಥಿಯ ಬ್ಯಾಂಕ್ ಪಾಸ್ ಪುಸ್ತಕ.

15. ವಿದ್ಯಾರ್ಥಿಗಳು ಅಗತ್ಯ ದಾಖಲೆಗಳನ್ನು Online ನಲ್ಲಿ Upload ಮಾಡಬೇಕು ಹಾಗೂ upload ಮಾಡುವ ದಾಖಲೆ ಪತ್ರಗಳ size 512KB ಮೀರಿರಬಾರದು.

ಮೇಲ್ಕಂಡ ಎಲ್ಲಾ ದಾಖಲೆಗಳೊಂದಿಗೆ ವಿದ್ಯಾರ್ಥಿಗಳು **"ಕರ್ನಾಟಕ ಕಾರ್ಮಿಕ ಕಲ್ಯಾಣ ಮಂಡಳಿಯ"** https://klwbapps.karnataka.gov.in ವೆಬ್ ಸೈಟ್‌ನಲ್ಲಿ ಅರ್ಜಿಗಳನ್ನು ಸಲ್ಲಿಸಬೇಕು. ನಂತರ Online ನಲ್ಲಿ Upload ಮಾಡಿದ ಎಲ್ಲಾ ದಾಖಲೆ ಪತ್ರ ಹಾಗೂ ಅರ್ಜಿಯ ಒಟ್ಟು ೨ ಸೆಟ್ ಸ್ವಯಂ ದೃಢೀಕರಿಸಿದ (Self attested) ಪ್ರತಿಗಳನ್ನು ಕಾಲೇಜಿನ ವಿದ್ಯಾರ್ಥಿವೇತನ ವಿಭಾಗಕ್ಕೆ ಅರ್ಜಿಯನ್ನು Online ನಲ್ಲಿ ಪರಿಶೀಲಿಸಲು ನೀಡಬೇಕು. ನಂತರ ದಾಖಲೆಗಳುನ್ನು ಪರಿಶೀಲಿಸಿದ ನಂತರ ಪ್ರಾಂಶುಪಾಲರ ದೃಢೀಕರಣ ಸಹಿಯೊಂದಿಗೆ ವಿದ್ಯಾರ್ಥಿಗಳಿಗೆ ೧ ಸೆಟ್ ದಾಖಲೆ ಪ್ರತಿಗಳನ್ನು ನೀಡಲಾಗುವುದು.

**Classroom Circulations : CE / ME / EE / EC / TC / CS / IS / AIML/PHY / CHE / MATHS / MBA / MCA / BOYS HOSTEL MESS / GIRLS HOSTEL MESS / TRAN / SPORTS/ LIB / EXAM / CHARD / OFFICE**

ಪ್ರಾಂಶುಪಾಲರು